**ದಿನಾಂಕ: 09–02–2012 ರಂದು ಬೆಳಿಗ್ಗೆ 11.00 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ / ಕೆರೆಗಳು –ಪರಿಸರ ಕೋಶ / ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು | | | ಹಾಜರಿದ್ದ ಅಧಿಕಾರಿಗಳು | |
|---|---|---|---|---|
| ಶ್ರೀಯುತರಾದ :– | | | | |
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 2 | **ಎನ್.ಎಂ.ಕೃಷ್ಣಮೂರ್ತಿ** | ಸದಸ್ಯರು | 2 | ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ & ದಕ್ಷಿಣ) |
| 3 | ಬಿ.ಆರ್.ಚಂದ್ರಶೇಖರ್ | ಸದಸ್ಯರು | 3 | ಕಾರ್ಯಪಾಲಕ ಅಭಿಯಂತರರು(ಪರಿಸರ ಕೋಶ–ಕೆರೆಗಳು) |
| 4 | **ಹೆಚ್.ಎನ್.ಗಂಗಾಧರ್** | ಸದಸ್ಯರು | 4 | **ಕಾರ್ಯಪಾಲಕ ಅಭಿಯಂತರರು(ಯೋಜನೆ– ಪೂರ್ವ/ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ವಲಯ** |
| 5 | ಎನ್.ಶಕುಂತಲ | ಸದಸ್ಯರು | | |
| 6 | **ಗೀತಾ ಶ್ರೀನಿವಾಸರೆಡ್ಡಿ** | ಸದಸ್ಯರು | | |
| 7 | **ಎಮ್.ಶಿವರಾಜ್** | ಸದಸ್ಯರು | 5 | **ತೋಟಗಾರಿಕೆ ಅಧೀಕ್ಷಕರು (ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ)ವಲಯ** |
| 8 | **ಆರ್.ಎಸ್.ಸತ್ಯನಾರಾಯಣ್** | ಸದಸ್ಯರು | | |
| 9 | **ಕೆ.ದೊಡ್ಡಣ್ಣ** | ಸದಸ್ಯರು | 5 | **ಅರಣ್ಯಾಧಿಕಾರಿಗಳು(ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ)ವಲಯ** |
| 10 | ಅಶ್ವಥ್‌ನಾರಾಯಣ್.ಜಿ.ಎ. | ಸದಸ್ಯರು | | |
| 11 | ಎಸ್.ವಿಜಯನ್ | ಸದಸ್ಯರು | | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ ಮಾತನಾಡುತ್ತಾ, ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಪಟ್ಟಂತೆ 2011–12ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ಅನುದಾನಕ್ಕೆ ಅನುಗುಣವಾಗಿ ಕಾರ್ಯಕ್ರಮ ಪಟ್ಟಿ ತಯಾರಿಸಿ, ಸಮಿತಿಯ ಅನುಮೋದನೆ ಪಡೆಯುವ ಬಗ್ಗೆ ಹಿಂದಿನ ಸಭೆಯಲ್ಲಿ ತಿಳಿಸಲಾಗಿದ್ದು, ಅದರಂತೆ, ಪಿ.ಓ.ಡಬ್ಲ್ಯೂ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿ ಜರೂರಾಗಿ ಕಳುಹಿಸುವಂತೆ ಸೂಚಿಸಿದರು.

ಉದ್ಯಾನವನಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ 2011–12ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ಅನುದಾನಕ್ಕೆ ಅನುಗುಣವಾಗಿ ಹೊಸ ವಲಯಗಳಿಗೆ ರೂ.500.00 ಲಕ್ಷ ಹಾಗೂ ಹಳೆಯ ವಲಯಗಳಿಗೆ ರೂ.400.00 ಲಕ್ಷಗಳಂತೆ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿ, ಸಮಿತಿಯ ಅನುಮೋದನೆ ಪಡೆಯುವ ಬಗ್ಗೆ ಕಾರ್ಯಪಾಲಕ ಅಭಿಯಂತರರು(ಯೋಜನೆ) ರವರೊಂದಿಗೆ ಚರ್ಚಿಸಿ ತ್ವರಿತವಾಗಿ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿ ಮಂಡಿಸಲು ಸೂಚಿಸಿದರು.

ಕೆರೆಗಳು–ಪರಿಸರ ಕೋಶಕ್ಕೆ ಸಂಬಂಧಪಟ್ಟಂತೆ 2011–12ನೇ ಸಾಲಿನ ಆಯವ್ಯಯದಲ್ಲಿ ಯಾವ ಯಾವ ಕರೆಗಳಿಗೆ ಎಷ್ಟೆಷ್ಟು ಹಣವನ್ನು ಕೆರೆಗಳ ಅಭಿವೃದ್ಧಿಗೆ ಕಾಯ್ದಿರಿಸಲಾಗಿದೆ ಎಂಬುದರ ಬಗ್ಗೆ ಅಧ್ಯಕ್ಷರು ಅಧಿಕಾರಿಗಳೊಂದಿಗೆ ಚರ್ಚಿಸಿದರು.

**ಮುಂದುವರೆದಿದೆ. . . . . . .**

ಬೇಸಿಗೆ ಕಾಲ ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ, ಬೇಸಿಗೆ ಕಾಲ ಮುಗಿಯುವವರೆಗೂ, ಉದ್ಯಾನವನಗಳಲ್ಲಿ ಹಾಗೂ ಸರ್ಕಲ್ ಮೀಡಿಯನ್‌ಗಳಲ್ಲಿ, ರಸ್ತೆ ಬದಿಯಲ್ಲಿರುವ ಗಿಡಗಳು ಒಣಗದಂತೆ ನಾಲ್ಕು ತಿಂಗಳ ಕಾಲ ದಿನಕ್ಕೆ ಎರಡು ಬಾರಿಯಾದರೂ ನೀರನ್ನು ಹಾಕಲು ಸೂಚಿಸಿದರು. ಹಳೆಯ ಏರಿಯಾಗಳಿಗಿಂತ ಹೊಸ ಏರಿಯಾಗಳಲ್ಲಿ ಸಮಸ್ಯೆಗಳು ಜಾಸ್ತಿ ಇರುವುದು ಕಂಡು ಬಂದಿದ್ದು, ಬೋರ್‌ವೆಲ್‌ಗಳಲ್ಲಿ ನೀರಿನ ಲಭ್ಯತೆ ಇಲ್ಲದಿದ್ದರೆ, ಪ್ರೈವೇಟ್ ಟ್ರಾಕ್ಟರ್ ಮುಖಾಂತರವಾದರೂ ಗಿಡಗಳಿಗೆ ನೀರು ಹಾಕಿ ಸಂರಕ್ಷಿಸಲು ಸೂಚಿಸಿದರು. ಉದ್ಯಾನವನಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಪಿ.ಓ.ಡಬ್ಲ್ಯೂ.ನಲ್ಲಿ ಹಣವನ್ನು ಪ್ರಾವಿಜನ್ ಮಾಡಿಕೊಳ್ಳುವಂತೆ ತಿಳಿಸಿ, ಯಾವುದೇ ಕಾರಣಕ್ಕೂ ಹಣದ ದುರುಪಯೋಗವಾಗಬಾರದೆಂದು ಸೂಚಿಸಿದರು.

**ಶ್ರೀ.ಕೆ.ದೊಡ್ಡಣ್ಣ, ಸದಸ್ಯರು** : ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನವು ಕೆಲವು ವಾರ್ಡ್‌ಗಳಲ್ಲಿ ಪೂರ್ಣವಾಗಿ ಬಳಕೆಯಾಗುವುದಿಲ್ಲ, ಆ ರೀತಿ ಉಳಿಕೆಯಾದ ಹಣವನ್ನು ಬೇರೆ ವಾರ್ಡ್‌ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಿಕೊಳ್ಳಲು ಅವಕಾಶವಿದೆಯೇ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

**ಶ್ರೀ.ಚಂದ್ರಶೇಖರ್, ತೋಟಗಾರಿಕೆ ಅಧೀಕ್ಷಕರು(ಪೂರ್ವ)**ರವರು ಮಾತನಾಡುತ್ತಾ, ವಾರ್ಡ್‌ಗಳಿಗೆ ಮೀಸಲಿಟ್ಟ ಅನುದಾನದಲ್ಲಿ ಆಯಾ ವಾರ್ಡ್‌ಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಣೆ ಮಾಡಿ, ಉಳಿಕೆಯಾದ ಹಣವನ್ನು ಅವಶ್ಯಕತೆ ಇರುವ ಇತರೆ ವಾರ್ಡ್‌ಗಳಿಗೆ ಬಳಸಿಕೊಳ್ಳಲಾಗಿದೆಯೆಂದು ತಿಳಿಸಿದರು.

**ಶ್ರೀ.ಬಿ.ಆರ್.ಚಂದ್ರಶೇಖರ್, ಸದಸ್ಯರು** ಬಗಲಗುಂಟೆ ವ್ಯಾಪ್ತಿಯಲ್ಲಿ ಒಂದು ಕೆರೆ ಇದ್ದು, ಆದು ಬಿ.ಡಿ.ಎ.ರವರ ವಶದಲ್ಲಿದ್ದು, ಇಲ್ಲಿಯವರೆಗೆ ಯಾವುದೇ ಅಭಿವೃದ್ಧಿ ಕಾರ್ಯಗಳು ಅಲ್ಲಿ ನಡೆಯುತ್ತಿಲ್ಲ. ಆದುದರಿಂದ, ಸದರಿ ಕೆರೆಯನ್ನು ಪಾಲಿಕೆಗೆ ಹಸ್ತಾಂತರಿಸಲು ಸರ್ಕಾರಕ್ಕೆ ಪತ್ರ ಮುಖೇನ ಕೋರಲಾಗಿದ್ದು, ಸರ್ಕಾರದಿಂದ ಆದೇಶ ಬಂದ ಕೂಡಲೇ ಸದರಿ ಕೆರೆಯನ್ನು ಪಾಲಿಕೆ ವತಿಯಿಂದ ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

**ಶ್ರೀ.ಕೆ.ದೊಡ್ಡಣ್ಣ, ಸದಸ್ಯರು** : ಉದ್ಯಾನವನಗಳ ನಿರ್ವಹಣೆ ಬಗ್ಗೆ ಅಸಮಧಾನ ವ್ಯಕ್ತಪಡಿಸುತ್ತಾ, ಒಬ್ಬರೇ ಗುತ್ತಿಗೆದಾರರು ಇಪ್ಪತ್ತೈದು ಮೂವತ್ತು ಜನರನ್ನು ಹಿಡಿತದಲ್ಲಿಟ್ಟುಕೊಂಡು ಎಲ್ಲಾ ಉದ್ಯಾನವನಗಳ ನಿರ್ವಹಣೆಯನ್ನು ನಿರ್ವಹಿಸುತ್ತಿರುವುದರಿಂದ ನಿರ್ವಹಣೆ ಕಾರ್ಯ ಸರಿಯಾಗಿ ನಡೆಯುತ್ತಿಲ್ಲವೆಂದು, ಟೆಂಡರ್ ಕರೆದು ಹೊಸ ಏಜೆನ್ಸಿರವರಿಗೆ ಅವಕಾಶ ನೀಡಬೇಕು ಹಾಗೂ ವಾರ್ಡ್ ಸದಸ್ಯರುಗಳು ಸೂಚಿಸುವ ಏಜೆನ್ಸಿಯವರನ್ನು ಉದ್ಯಾನವನಗಳ ನಿರ್ವಹಣೆ ಕಾರ್ಯಕ್ಕೆ ನಿಯೋಜಿಸಲು ಸಲಹೆ ನೀಡಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

**ಮುಂದುವರೆದಿದೆ. . . . . . .**

1. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/41/ 11-12, ದಿನಾಂಕ: 12-01-2012</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ.151, ಕೋರಮಂಗಲ ವಾರ್ಡಿನ 3ನೇ ಬ್ಲಾಕ್, 12ನೇ ಮುಖ್ಯರಸ್ತೆಯಲ್ಲಿನ ಉದ್ಯಾನವನವನ್ನು M/S GRAND MERCURE BANGALORE, 12th Main, 3rd Block, Koramangala ರವರು ಒಂದು ವರ್ಷದ ಅವಧಿಗೆ ದತ್ತು ಆಧಾರದಂತೆ ನಿರ್ವಹಿಸಲು ಕೋರಿರುತ್ತಾರೆ. ಈ ಬಗ್ಗೆ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸುವ ನಿಟ್ಟಿನಲ್ಲಿ ತೋಟಗಾರಿಕೆ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಪಾಲಿಕೆಯ ಸಭೆಗೆ ಮಂಡಿಸಲು, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರ ದಿನಾಂಕ: 28-12-2011 ರ ಟಿಪ್ಪಣಿ.

<u>ನಿರ್ಣಯ</u> : **– ಸ್ಥಳ ಪರಿಶೀಲನೆಗಾಗಿ ಮುಂದೂಡಲಾಗಿದೆ.**

2. **ವಿಷಯ ಸಂಖ್ಯೆ:ತೋ/ಸ್ಥಾ/ಸ/42/ 11-12, ದಿನಾಂಕ: 25-01-2012**

ಬೆಂಗಳೂರು ಮಹಾನಗರ ಜಿಲ್ಲೆಯ ಮಹದೇವಪುರ ವಲಯದ ಅಂಬಲೀಪುರ ಮೇಲಿನಕೆರೆಯ ಒಟ್ಟು ವಿಸ್ತೀರ್ಣ 12 ಎಕರೆ, 16 ಗುಂಟೆಗಳಾಗಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊರತೆಯನ್ನು ಹೋಗಲಾಗಿಡಿಸಲು ಮೊದಲನೇ ಹಂತದಲ್ಲಿ ಅಂಬಲೀಪುರ ಮೇಲಿನ ಕೆರೆಯಲ್ಲಿ ಮಳೆ ನೀರು ಸಂಗ್ರಹಣೆ ಮಾಡುವ ಸಲುವಾಗಿ, ಸದರಿ ಕೆರೆಯನ್ನು ಸಮಗ್ರ ಅಭಿವೃದ್ಧಿಪಡಿಸುವ ಸಲುವಾಗಿ, ಮೊದಲನೆ ಹಂತದಲ್ಲಿ ಸದರಿ ಕೆರೆಯಲ್ಲಿ ಅನಧಿಕೃತ ಒತ್ತುವರಿಯನ್ನು ತಡೆಯಲು ಅಂಬಲೀಪುರ ಮೇಲಿನಕೆರೆಯ ಗಡಿಗೆ ತಂತಿಬೇಲಿ ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಮಾನ್ಯ ಸಚಿವರು, ಅಂಬಲೀಪುರ ಕೆರೆಗೆ ಭೇಟಿ ನೀಡಿದ ಸಮಯದಲ್ಲಿ, ಕೆರೆಯ ಸುತ್ತಮುತ್ತಲಿನ ಪ್ರದೇಶಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಉದ್ದೇಶದಿಂದ ಕೆರೆಯನ್ನು ಅಭಿವೃದ್ಧಿಗೊಳಿಸುವಂತೆ ಸೂಚಿಸಿರುತ್ತಾರೆ. ಪ್ರಸ್ತುತ, ಕೆರೆಗೆ ಯಾವುದೇ ಕೊಳಚೆ ನೀರು ಮತ್ತು ತ್ಯಾಜ್ಯ ಸೇರುತ್ತಿಲ್ಲವಾದ್ದರಿಂದ, ಅಂಬಲೀಪುರ ಮೇಲಿನಕೆರೆಯಲ್ಲಿ ಮಳೆನೀರನ್ನು ಬರುವ ಮಳೆಗಾಲದಲ್ಲಿ ಸಂಗ್ರಹಿಸಲು ಕೆರೆಯನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯಲ್ಲಿ ಕೆರೆಯ ಒಳಹರಿವು ಹೆಚ್ಚಿಸಲು ಒಳ ಹರಿವು ಕಾಲುವೆ ದುರಸ್ಥಿ, ಹೂಳು ತೆಗೆಯುವುದು, ಏರಿ ದುರಸ್ಥಿ ಮುಂತಾದ ಅಂಶಗಳನ್ನು ಅಳವಡಿಸಿಕೊಂಡು ಕೆರೆಯ ಅಭಿವೃದ್ಧಿಯ ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

ಮೇಲಿನ ಕಾಮಗಾರಿಯ ಟೆಂಡರ್‌ನಲ್ಲಿ ಗುತ್ತಿಗೆದಾರರಾದ ಶ್ರೀ.ಎನ್.ಎಮ್.ಕೃಷ್ಣಮೂರ್ತಿ ರವರು ರೂ.245,96,302.09(ಎರಡು ಕೋಟಿಯ ನಲವತ್ತೈದು ಲಕ್ಷದ ತೊಂಭತ್ತಾರು ಸಾವಿರದ ಮೂನ್ನೂರ ಎರಡು ರೂಪಾಯಿ ಮತ್ತು ಒಂಭತ್ತು ಪೈಸೆಗಳು ಮಾತ್ರ) ಗಳನ್ನು ನಮೂದಿಸಿದ್ದು, ಸದರಿ ಮೊತ್ತವು

**ಮುಂದುವರೆದಿದೆ. . . . . . .**

2010-11ನೇ ಸಾಲಿನ ಅನುಮೋದಿತ ದರಪಟ್ಟಿಗಿಂತ ಶೇಕಡ -7.2% ಕಡಿಮೆ ಮೊತ್ತವಾಗಿರುವುದರಿಂದ, ಸದರಿ ಟೆಂಡರ್‌ನ್ನು ಅನುಮೋದಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರ ದಿನಾಂಕ:23-01-2012 ರ ಟಿಪ್ಪಣಿ.

**<u>ನಿರ್ಣಯ</u> : ದಿನಾಂಕ: 23-01-2012 ರ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಒಪ್ಪಿದೆ.**

3. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/43/ 11-12, ದಿನಾಂಕ: 25-01-2012</u>**

ವಾರ್ಡ್ ಸಂಖ್ಯೆ.17ರ ಜೆ.ಪಿ.ಪಾರ್ಕ್‌ನ ಈಜುಕೊಳಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.15.50 ಲಕ್ಷಗಳಿಗೆ 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "ಉದ್ಯಾನವನಗಳಿಗೆ ದೀಪಗಳು ಮತ್ತು ಶೌಚಾಲಯ ವ್ಯವಸ್ಥೆ ಪಿ0973" ಅಡಿ ಅನುಮೋದನೆ ನೀಡಲು ಮುಖ್ಯ ಅಭಿಯಂತರರು(ವಿದ್ಯುತ್)ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಲು ಶ್ರೀ.ಬಿ.ಆರ್.ನಂಜುಂಡಪ್ಪ, ಮಾನ್ಯ ಆಡಳಿತ ಪಕ್ಷದ ನಾಯಕರು ಪತ್ರದ ಮುಖಾಂತರ ಕೋರಿರುತ್ತಾರೆ.

2011-12ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ.66 ರಲ್ಲಿ, ಲೆಕ್ಕಶೀರ್ಷಿಕೆ "ಉದ್ಯಾನವನಗಳಿಗೆ ದೀಪಗಳು ಮತ್ತು ಶೌಚಾಲಯ ವ್ಯವಸ್ಥೆ ಪಿ0973" ಅಡಿ ರೂ.100.00 ಲಕ್ಷಗಳನ್ನು ಮೀಸಲಿಡಲಾಗಿದೆ. ಸದರಿ ಲೆಕ್ಕಶೀರ್ಷಿಕೆಯಲ್ಲಿ ಕಾಮಗಾರಿಯ ಅಂದಾಜು ಮೊತ್ತ ರೂ.15.50 ಲಕ್ಷಗಳಿಗೆ ಭರಿಸಲು ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.

ಸಾರ್ವಜನಿಕರ ಹಿತದೃಷ್ಠಿಯಿಂದ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಲು ಕೋರಿದ್ದು, ಅಂದಾಜು ಮೊತ್ತ ರೂ.15.50 ಲಕ್ಷಗಳ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರ ದಿನಾಂಕ: 21-01-2012 ರ ಟಿಪ್ಪಣಿ.

**<u>ನಿರ್ಣಯ</u> :- ದಿನಾಂಕ:21-01-2012ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಮೇಲಿನ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವ ಪ್ರಯುಕ್ತ, ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.**

4. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/44/ 11-12, ದಿನಾಂಕ: 30-01-2012</u>**

ವಾರ್ಡ್ ಸಂಖ್ಯೆ.67ರ ಅಭಿವೃದ್ಧಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸುವ ಬಗ್ಗೆ.

**<u>ನಿರ್ಣಯ</u>:- ಮುಂದೂಡಲಾಗಿದೆ.**

5. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/45/ 11-12, ದಿನಾಂಕ: 31-01-2012</u>**

*ಬಾಪೂಜಿ ನಗರ ವಾರ್ಡ್ ಸಂಖ್ಯೆ.134ರ ವ್ಯಾಪ್ತಿಯಲ್ಲಿ ಒಟ್ಟು 09 ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ನೀಡಲು ಅನುಮತಿ ಕೋರುವ ಬಗ್ಗೆ.*

**<u>ನಿರ್ಣಯ</u>**:- ಮುಂದೂಡಲಾಗಿದೆ.

**ಮುಂದುವರೆದಿದೆ.** . . . . . . .

6. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/46/ 11-12, ದಿನಾಂಕ: 02-02-2012</u>**

ಬೆಂಗಳೂರು ಮಹಾನಗರ ಜಿಲ್ಲೆಯ, ಮಹದೇವಪುರ ವಲಯದ, ಶೀಗೆಹಳ್ಳಿ ಕೆರೆಯ ಒಟ್ಟು ವಿಸ್ತೀರ್ಣ 27 ಎಕರೆ 18 ಗುಂಟೆಗಳಾಗಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊರತೆಯನ್ನು ಹೋಗಲಾಡಿಸಲು ಶೀಗೆಹಳ್ಳಿ ಕೆರೆಯಲ್ಲಿ ಮಳೆನೀರು ಸಂಗ್ರಹಣೆ ಮಾಡುವ ಸಲುವಾಗಿ, ಸದರಿ ಕೆರೆಯನ್ನು ಸಮಗ್ರ ಅಭಿವೃದ್ಧಿ ಪಡಿಸುವ ಸಲುವಾಗಿ, ಮೊದಲನೆ ಹಂತದಲ್ಲಿ ಸದರಿ ಕೆರೆಯಲ್ಲಿ ಅನಧಿಕೃತ ಒತ್ತುವರಿಯನ್ನು ತಡೆಯಲು ಶೀಗೆಹಳ್ಳಿ ಕೆರೆಯ ಗಡಿಗೆ ತಂತಿಬೇಲಿ ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಪ್ರಸ್ತುತ ಕೆರೆಗೆ ಕೊಳಚೆ ನೀರು ಮತ್ತು ತ್ಯಾಜ್ಯ ಸೇರುತ್ತಿರುವುದರಿಂದ, ಶೀಗೆಹಳ್ಳಿ ಕೆರೆಯಲ್ಲಿ ಮಳೆನೀರನ್ನು ಬರುವ ಮಳೆಗಾಲದಲ್ಲಿ ಸಂಗ್ರಹಿಸಲು ಕೆರೆಯನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯಲ್ಲಿ ಕೆರೆಯ ಒಳ ಹರಿವು ಹೆಚ್ಚಿಸಲು ಒಳ ಹರಿವು ಕಾಲುವೆ ದುರಸ್ಥಿ, ಹೂಳು ತೆಗೆಯುವುದು, ಏರಿ ದುರಸ್ಥಿ ಮುಂತಾದ ಆಂಶಗಳನ್ನು ಅಳವಡಿಸಿಕೊಂಡು ಕೆರೆಯ ಅಭಿವೃದ್ಧಿಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಮೇಲಿನ ಕಾಮಗಾರಿಯ ಟೆಂಡರ್‌ನಲ್ಲಿ ಗುತ್ತಿಗೆದಾರರಾದ ಶ್ರೀ.ಎನ್.ಎಮ್.ಕೃಷ್ಣಮೂರ್ತಿ ರವರು, ರೂ.2,54,58,452-53 (ಎರಡು ಕೋಟಿಯ ಐವತ್ತನಾಲ್ಕು ಲಕ್ಷದ, ಐವತ್ತೆಂಟು ಸಾವಿರದ ನಾಲ್ಕುನೂರ ಐವತ್ತೆರಡು ರೂಪಾಯಿ ಮತ್ತು ಐವತ್ತ ಮೂರು ಪೈಸೆಗಳು ಮಾತ್ರ) ಗಳನ್ನು ನಮೂದಿಸಿದ್ದು, ಸದರಿ ಮೊತ್ತವು 2011-12ನೇ ಸಾಲಿನ ಅನುಮೋದಿತ ದರಪಟ್ಟಿಗಿಂತ ಶೇಕಡ -11.70% ಕಡಿಮೆ ಮೊತ್ತವಾಗಿರುವುದರಿಂದ, ಸದರಿ ಟೆಂಡರ್‌ಗೆ ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರ ದಿನಾಂಕ: 27-01-2012 ರ ಟಿಪ್ಪಣಿ.

**<u>ನಿರ್ಣಯ</u> :-ದಿನಾಂಕ:27-01-2012 ರ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಒಪ್ಪಿದೆ.**

7. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/47/ 11-12, ದಿನಾಂಕ: 02-02-2012</u>**

*<u>ವಾರ್ಡ್ ನಂ.</u>90 ರಲ್ಲಿ ಇರುವ ಹಲಸೂರು ಕೆರೆಯ ಕಾಲು ಸೇತುವೆ ನಿರ್ಮಾಣ ಹಾಗೂ ಕೆರೆಯ ದುರಸ್ಥಿ ಮಾಡುವ ಬಗ್ಗೆ.*

**<u>ನಿರ್ಣಯ</u>**:- ಮುಂದೂಡಲಾಗಿದೆ.

8. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/48/ 11-12, ದಿನಾಂಕ: 09-02-2012</u>**

*ರಾಜರಾಜೇಶ್ವರಿ ನಗರ ವಲಯದ ಹೇರೋಹಳ್ಳಿ ಕೆರೆಯಲ್ಲಿ ಕಲುಷಿತ ನೀರನ್ನು ಶುದ್ಧೀಕರಿಸಲು SBT(Soil Bio Technology) ಆಧಾರಿತ ತಂತ್ರಜ್ಞಾನದ ವಿಕೇಂದ್ರೀಕೃತ ಕಿರು ನೈರ್ಮಲೀಕರಣ ಘಟಕ (1.5 MLD) STP ಸ್ಥಾಪನೆ* ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು-5, (ಪರಿಸರ ಕೋಶ-ಕೆರೆಗಳು)ರವರು ಮೊದಲನೇ ಕೆರೆಯಲ್ಲಿ ಇ_ಪ್ರೋಕ್ಯೂರ್‌ಮೆಂಟ್ ವಿಧಾನದ ಮೂಲಕ Turnkey

ಮಾದರಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 03(ಮೂರು) ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಇಬ್ಬರು) ಟೆಂಡರ್‌ದಾರರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು-5, ಪರಿಸರ ಕೋಶ, ಕೆರೆಗಳು ರವರು ಕನಿಷ್ಟ ಟೆಂಡರ್‌ದಾರರರಾದ **ಶ್ರೀ.ಹರೇಶ್ ಸಂಕಲ್ ಚಂದ್ ಹಿರಾನಿ,** ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ರೂ.310.22 ಲಕ್ಷಗಳ ಅಂದಾಜು ಪಟ್ಟಿಗೆ 2010-11ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು, ಪರಿಸರ ಕೋಶ, ಕೆರೆಗಳು ರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.2,93,00,000-00 ಗಳಾಗಿರುತ್ತದೆ. ಈ ಕಾಮಗಾರಿಗೆ ನಮೂದಿಸಿದ ಟೆಂಡರ್ ಮೊತ್ತ ರೂ.3,45,54,716.00 ಗಳನ್ನು ಗುತ್ತಿಗೆದಾರರಾದ **ಶ್ರೀ.ಹರೇಶ್ ಸಂಕಲ್ ಚಂದ್ ಹಿರಾನಿ,** ಟೆಂಡರ್‌ಗಿಟ್ಟ ಮೊತ್ತವಾದ ರೂ.2,93,00,000-00(2010-11ನೇ ಸಾಲಿನ ಲೋಕೋಪಯೋಗಿ ಹಾಗೂ ಸಣ್ಣ ನೀರಾವರಿ ಇಲಾಖೆಯ ದರಸೂಚಿಯನ್ವಯ) ಗಳಿಗೆ ಹೋಲಿಸಿದಾಗ ಶೇಕಡ 17.93% ರಷ್ಟು ಹೆಚ್ಚು ಇರುತ್ತದೆ ಮತ್ತು ಸದರಿ ಟೆಂಡರ್‌ಗೆ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡ 13.48% ರಷ್ಟು ಹೆಚ್ಚಿಗೆ ಇರುತ್ತದೆ. ಸದರಿ ಟೆಂಡರ್‌ನ್ನು ಅನುಮೋದಿಸಲು ಮುಕ್ಯ ಅಭಿಯಂತರರು, ಪರಿಸರ ಕೋಶ, ಕೆರೆಗಳು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು(ಟೆಂಡರ್ ಪ್ರೀಮಿಯಂ ಸೇರಿ) ರೂ.3,45,54,716-00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/335/ಎಮ್ಎನ್‌ವೈ/2007 (ಭಾ) ದಿನಾಂಕ:11-05-2009 ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/636/ಎಮ್.ಎನ್.ವೈ./2010, ಬೆಂಗಳೂರು, ದಿನಾಂಕ: 02-04-2011 ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ. **ಶ್ರೀ.ಹರೇಶ್ ಸಂಕಲ್ ಚಂದ್ ಹಿರಾನಿ ರವರು** ನಮೂದಿಸಿರು ಮೊತ್ತ ರೂ.3,45,54,716-00 (ರೂಪಾಯಿ ಮೂರು ಕೋಟಿ, ನಲವತ್ತೈದು ಲಕ್ಷದ ಐವತ್ತು ನಾಲ್ಕು ಸಾವಿರದ ಏಳುನೂರ ಹದಿನಾರು ಮಾತ್ರ) ಗಳಾಗಿದ್ದು, ಇದು 2011-12ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡ 13.48 ರಷ್ಟು ಹೆಚ್ಚು ಇರುವುದು. ಆದಕಾರಣ ಟೆಂಡರ್‌ನ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 01-02-2012 ರ ಟಿಪ್ಪಣಿ.

<u>ನಿರ್ಣಯ</u> :- **ದಿನಾಂಕ:01-02-2012ರ ಮಾನ್ಯ ವಿಶೇಷ ಆಯಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಒಪ್ಪಿದೆ.**

**ಮುಂದುವರೆದಿದೆ. . . . . . . .**

9. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/49/ 11-12, ದಿನಾಂಕ: 09-02-2012</u>**

*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ದೀಪಾಂಜಲಿ ಕೆರೆಗೆ ಬರುವ ಕಲುಷಿತ ನೀರನ್ನು ಶುದ್ಧೀಕರಿಸಲು SBT(Soil Bio Technology) ಆಧಾರಿತ ತಂತ್ರಜ್ಞಾನದ ವಿಕೇಂದ್ರೀಕೃತ ಕಿರು ನೈರ್ಮಲೀಕರಣ ಘಟಕ (0.3 MLD) STP ಸ್ಥಾಪಿಸುವ ಕಾಮಗಾರಿಯ ಅಂದಾಜು ಪಟ್ಟಿಗೆ ಅನುಮೋದನೆ ಕುರಿತು.*

**<u>ನಿರ್ಣಯ</u>**:- ಮುಂದೂಡಲಾಗಿದೆ.

10. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/50/ 11-12, ದಿನಾಂಕ: 09-02-2012</u>**

*ವಾರ್ಡ್ ನಂ.35ರಲ್ಲಿರುವ ಸ್ಯಾಂಕಿಕೆರೆಯ ಅಂಗಳದಲ್ಲಿ ಇರುವ ಉದ್ಯಾನವನದಲ್ಲಿ RMZ Corp. ಸಂಸ್ಥೆಯವರು ಸಾರ್ವಜನಿಕರ ವ್ಯಾಯಾಮ ಉಪಕರಣಗಳನ್ನು ಅಳವಡಿಸಲು ಹಾಗೂ ಈ ಕೆರೆಯ ನಿರ್ವಹಣೆ ಮಾಡುವ ಬಗ್ಗೆ.*

**<u>ನಿರ್ಣಯ</u>**:- ಮುಂದೂಡಲಾಗಿದೆ.

11. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/51/ 11-12, ದಿನಾಂಕ: 09-02-2012</u>**

ಪಾಲಿಕೆ ವ್ಯಾಪ್ತಿಯ ಉದ್ಯಾನವನಗಳ ನಿರ್ವಹಣೆಯನ್ನು ಖಾಸಗಿ ಮತ್ತು ಸಂಘ-ಸಂಸ್ಥೆಗಳಿಗೆ ಗುತ್ತಿಗೆ ನೀಡಿರುವ ಕಡತಗಳನ್ನು ಸಮಿತಿಯ ಪರಿಶೀಲನೆಗೆ ಒದಗಿಸುವ ಬಗ್ಗೆ.

**ನಿರ್ಣಯ:- ಕೈಬಿಡಲಾಗಿದೆ**

12. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/52/ 11-12, ದಿನಾಂಕ: 09-02-2012</u>**

ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ, ಈ ಕೆಳಕಂಡ ಕಾಮಗಾರಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯಾಗಿದ್ದು, ಜಾಬ್ ಕೋಡ್ ಸಹ ನೀಡಲಾಗಿರುತ್ತದೆ. ಸದರಿ ಕಾಮಗಾರಿಗಳನ್ನು ಜರೂರಾಗಿ ನಿರ್ವಹಿಸಬೇಕಾಗಿದ್ದು, ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಠಿಯಿಂದ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್.ಸಂಸ್ಥೆಯ ಮುಖೇನ ಕೈಗೆತ್ತಿಕೊಂಡು ನಿರ್ವಹಿಸುವಂತೆ ಪಾಲಿಕೆ ಸದಸ್ಯರುಗಳು ಮನವಿ ಮಾಡಿಕೊಂಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪೂಜ್ಯ ಮಹಾಪೌರರು ದಿನಾಂಕ:01-08-2011ರ ಪತ್ರದಲ್ಲಿ ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ಆದೇಶ ನೀಡಿರುತ್ತಾರೆ. ಈ ಪ್ರಸ್ತಾವನೆಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ: 08-02-2012 ರ ಟಿಪ್ಪಣಿ.

| Sl. No. | Ward No. | Name of work | Amount in Lakhs |
|---|---|---|---|
| 1. | 50 | Balance work of Krishnaiahna playa park in Ward No.50 | 8.00 |
| 2. | 50 | Providing canopy and oter work at Krishnaiahna playa park in Ward No.50 | 12.00 |
| 3. | 80 | Providing Children equipments and oteher works at 13th main Indira nagar, 2nd stage, park by the side of Jain College. | 9.50 |

| | | | |
|---|---|---|---|
| 4. | 88 | Providing pathway and other development works at Jeevan Bheema Nagar, L.I.C. Colony Park in Ward No.88 | 8.00 |
| 5. | 46 | Improvements to pathway and other work at Adarsh park in Ward No.46 | 12.00 |
| 6. | 24 | Providing Children equipments and other works at service road park in Ward No.24 | 10.00 |
| 7. | 24 | Improvements to park near Ganesha Temple in Ward No.24 | 10.00 |
| 8. | 24 | Providing pathway and other works at 80ft road by the side of storm water drain(Right side) in Ward No.24 | 7.00 |
| 9. | 24 | Providing pathway and other works at 80ft road by the side of storm water drain(left side) in Ward No.24 | 7.00 |
| 10. | 24 | Providing Children equipments and other works at Hoysala Nagar Park. | 15.00 |
| 11. | 18 | Improvements to Buleward park in Ward No.18 | 10.00 |
| 12. | 34 | Improvements to Shanthidhama Park in Ward No.34 | 6.00 |
| 13. | 19 | Improvements to Vinayaka layout Bhooppasandra park in ward No.19 | 10.00 |
| 14. | 58 | Providing pathway and other development works at 6th cross, Thippasndra, Geethanjali Layout park. | 19.95 |
| 15. | 58 | Providing Children play equipments, sand bed and other development works at 6th cross, Thippasndra, Geethanjali Layout park. | 8.85 |
| 16. | 58 | Providing Ornamental grill and other development work at 6th cross, Thippasndra, Geethanjali Layout park. | 11.26 |

**ನಿರ್ಣಯ :- ದಿನಾಂಕ:08-02-2012 ರ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಒಪ್ಪಿದೆ.**

**13. ವಿಷಯ ಸಂಖ್ಯೆ:ತೋ/ಸ್ಥಾ/ಸ/53/ 11-12, ದಿನಾಂಕ: 14-02-2012**

ಉತ್ತರಹಳ್ಳಿ ಉಪ ವಿಭಾಗ ವ್ಯಾಪ್ತಿಗೆ ಬರುವ ಯಲಚೇನಹಳ್ಳಿ, ವಾರ್ಡ್ ಸಂಖ್ಯೆ.185 ರಲ್ಲಿ 2010-11ನೇ ಸಾಲಿನ ಪ್ರದೇಶಾಭಿವೃದ್ಧಿ ನಿಧಿಯ (ಶಾಸಕರ ಅನುದಾನ) ಯೋಜನೆಯಡಿಯಲ್ಲಿ Improvements to Annyyappa kere park in Ward No.185 (Yelachenahalli)

**ನಿರ್ಣಯ:-** ಮುಂದೂಡಲಾಗಿದೆ.

**14. ವಿಷಯ ಸಂಖ್ಯೆ:ತೋ/ಸ್ಥಾ/ಸ/54/ 11-12, ದಿನಾಂಕ: 09-02-2012**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯು, ವಿವಿಧ ಮಹಾನಗರಗಳಲ್ಲಿನ ಉದ್ಯಾನವನಗಳ ನಿರ್ವಹಣೆ ಮತ್ತು ಪರಿಸರದ ಗುಣಮಟ್ಟ ಅಧ್ಯಯನ ಮಾಡಿ, ಅದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಇಲಾಖೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಹತ್ತು ದಿನಗಳ ಅಧ್ಯಯನ ಪ್ರವಾಸ ಕೈಗೊಳ್ಳಲು ತೀರ್ಮಾನಿಸಲಾಗಿದ್ದು, ಅದರಂತೆ, **ಅಹಮದಬಾದ್, ಸೂರತ್, ಜಮ್ಮು ಮತ್ತು ಕಾಶ್ಮೀರ್, ಸಿಮ್ಲಾ ಮತ್ತು ದೆಹಲಿ** ನಗರಗಳಿಗೆ ಭೇಟಿ ನೀಡುವುದೆಂದು, ಇದರಲ್ಲಿ ***ಅಧ್ಯಕ್ಷರು ಮತ್ತು ಸಮಿತಿಯ ಸದಸ್ಯರು – 10, ಸಾರ್ವಜನಿಕ ಸಂಪರ್ಕಾಧಿಕಾರಿ, ತೋಟಗಾರಿಕೆ ಅಧೀಕ್ಷಕರು, ಉಪ ಅರಣ್ಯ***

***ಸಂರಕ್ಷಣಾಧಿಕಾರಿ, ಸಮಿತಿಯ ಆಪ್ತ ಸಹಾಯಕರು*** ಸೇರಿದಂತೆ ಒಟ್ಟು 15 ಮಂದಿ ವಿಮಾನದಲ್ಲಿ ಪ್ರಯಾಣಿಸುವುದೆಂದು, ಇದಕ್ಕೆ ಸಂಬಂಧಪಟ್ಟಂತೆ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲು ತೋಟಗಾರಿಕೆ ಅಧೀಕ್ಷಕರು (ಪೂರ್ವ)ರವರಿಗೆ ಸೂಕ್ತ ಆದೇಶ ನೀಡಲು ಮಾನ್ಯ ಆಯುಕ್ತರನ್ನು ಕೋರುವುದೆಂದು ಸಮಿತಿಯು ತೀರ್ಮಾನಿಸಿತು.

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳ ಬಗ್ಗೆ ಕ್ರಮವಹಿಸಿ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಮಾನ್ಯ ಆಯುಕ್ತರು ಕಾರ್ಯ ಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :–

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರಿಗೆ ಕಳುಹಿಸಲಾಗಿದೆ.
- *ವಿಶೇಷ ಆಯುಕ್ತರು(ಯೋಜನೆ)ರವರ ಗಮನಕ್ಕೆ ತರಲಾಗಿದೆ.*
- ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು(ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಪ್ರಧಾನ ಅಭಿಯಂತರವರಿಗೆ ಕಳುಹಿಸಿದೆ.
- ಮುಖ್ಯ ಲೆಕ್ಕಾಧಿಕಾರಿ ರವರಿಗೆ ಕಳುಹಿಸಿದೆ.
- ಮುಖ್ಯ ಅಭಿಯಂತರರು(ಕೆರೆಗಳು–ಪರಿಸರ ಕೋಶ) ರವರಿಗೆ ಕಳುಹಿಸಿದೆ.
- ಕಾ.ಪಾ.ಅ.(ಕೆರೆಗಳು–ಪರಿಸರ ಕೋಶ) ಹಾಗೂ ಕಾ.ಪಾ.ಅ.(ಮಹಾಲಕ್ಷ್ಮೀಪುರ)ವಲಯರವರಿಗೆ ಕಳುಹಿಸಿದೆ.
- ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) & (ದಕ್ಷಿಣ) ರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಯೋಜನೆ – ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ / ಮಹದೇವಪುರ)ರವರಿಗೆ ಕಳುಹಿಸಿದೆ.
- *ತೋಟಗಾರಿಕೆ ಅಧೀಕ್ಷಕರು* (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಿದೆ.
- ವಲಯ ಅರಣ್ಯಾಧಿಕಾರಿಗಳು (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಿದೆ.
- ಕಛೇರಿ ಪ್ರತಿ.